# ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ

ಪ್ರಬುದ್ಧ ಕರ್ನಾಟಕ ಶತಮಾನೋತ್ಸವ, ಮಾನವಿಕ ಮತ್ತು ವಿಜ್ಞಾನ ಕರ್ನಾಟಕ ಸುವರ್ಣ ಮಹೋತ್ಸವ ಆಚರಣೆಯ ವರ್ಷ – 2021

## ಮಾನವಿಕ ಕರ್ನಾಟಕ

ಪ್ರಬುದ್ಧ ಕರ್ನಾಟಕದ ಚಿನ್ನದ ಹಬ್ಬದ ಹೊತ್ತಿಗೆ 'ವಿಜ್ಞಾನ ಕರ್ನಾಟಕ'ದ ಮೊದಲ ಸಂಚಿಕೆ ಪ್ರಾರಂಭವಾಯಿತು. ಅದರಲ್ಲಿ ಬರೆಯುತ್ತಾ ಅಂದು ಪ್ರಧಾನ ಸಂಪಾದಕರಾಗಿದ್ದ ದೇ.ಜವರೇಗೌಡರು "ಇದರಂತೆಯೇ ಸಮಾಜಶಾಸ್ತ್ರಗಳಿಗೆ ಮುಡಿಪಾದ ಮತ್ತೊಂದು ತ್ರೈಮಾಸಿಕ 'ಮಾನವಿಕ ಕರ್ನಾಟಕ'ವೆಂಬ ಹೆಸರಿನಲ್ಲಿ ಬೇಗನೆ ರೂಪುಗೊಳ್ಳಲೆಂದು ಕನ್ನಡದ ಕುಲದೈವಕ್ಕೆ ವಿಶ್ವವಿದ್ಯಾನಿಲಯ ಭಗವತಿಗೆ ಪ್ರಾರ್ಥನೆ ಸಲ್ಲಿಸಿ ಸಂಪಾದಕ ಮಂಡಳಿಯ ಸಭೆಯಲ್ಲಿ ಕಾಣಿಸಿಕೊಂಡ ಸೂಚನೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಿದರು". ಆದ್ದರಿಂದಲೆ ಮಾನವಿಕ ಕರ್ನಾಟಕ ಬಹುಬೇಗನೆ ರೂಪುಗೊಳ್ಳಲು ಸಾಧ್ಯವಾಯಿತು. ಮಾನವಿಕ ವಿಷಯಗಳಿಗೆ ಮೀಸಲಾಗಿರುವ, ಅಭಿರುಚಿಯ ಓದುಗರಿಗೆ ಪ್ರಿಯವಾಗಿರುವ ಕನ್ನಡ ಪತ್ರಿಕೆಯಾಗಿ ಹೊರಬಿದ್ದಿತು.

'ಮಾನವಿಕ ಕರ್ನಾಟಕ'ದ ಮೊದಲ ಸಂಚಿಕೆ-1970ರ ರಾಜ್ಯೋತ್ಸವದಂದು (ನವೆಂಬರ್ 1) ಪ್ರಕಟಿಸಬೇಕೆಂದು ನಿರ್ಧರಿಸಲಾಯಿತು. ಅದಕ್ಕೆ ವಿಶ್ವವಿದ್ಯಾನಿಲಯದ ಅನುಮತಿಯೂ ದೊರೆಯಿತು. ಅದರಂತೆ ಆ ದಿನದಂದೆ ಪ್ರಕಟವೂ ಆಯಿತು "ನಾಡಿನ ಶಿಕ್ಷಣ ಆಡಳಿತಗಳಲ್ಲಿ ಕನ್ನಡಕ್ಕೆ ಸಹಜವಾಗಿಯೇ ದೊರೆಯಬೇಕಾದ ಸ್ಥಾನಮಾನಗಳ ಬಗೆಗೆ ಹಿಂದೆಂದೂ ಕಾಣದ ಆಸೆ ಉತ್ಸಾಹಗಳು ಹೆಚ್ಚಾಗಿ ತೋರಿಬರುತ್ತಿರುವ ಈ ದಿನಗಳಲ್ಲಿ, ಕನ್ನಡವನ್ನು ಆ ಉದ್ದೇಶಗಳಿಗೆ ಸಜ್ಜುಗೊಳಿಸಬೇಕಾದುದು ಅದನ್ನು ಆಡುವವರ ಮೇಲಿನ ಹೊಣೆ..... ನಮ್ಮ ಭಾಷೆಗಳು ನಮ್ಮ ಬದುಕನ್ನು ಸಂಪೂರ್ಣವಾಗಿ ಆವರಿಸಿಕೊಂಡಾಗಲೆ ನಮ್ಮ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಲಭಿಸುವುದು. ನಮ್ಮ ಪ್ರಗತಿಗೆ ಲಾಭದಾಯಕವಾದ ಕೀಲಿಕೈ ದೊರೆಯುವುದು. ನಮ್ಮ ಭಾಷೆಗಳ ಬಳಕೆಯ ಅಗತ್ಯ ಈಗ ಚರ್ಚೆಯ ವಿಷಯವಾಗಿ ಉಳಿದಿಲ್ಲ. ಆ ಚರ್ಚೆಯನ್ನು ನಿಲ್ಲಿಸಿ ಕಾರ್ಯೋನ್ಮುಖವಾಗುವಲ್ಲಿ 'ಮಾನವಿಕ ಕರ್ನಾಟಕ'ದ ಪ್ರಕಟಣೆಯಂಥ ಸಂದರ್ಭಗಳು ಮಹತ್ವದ್ದಾಗಿದೆ."

ಮಾನವಿಕ ಕರ್ನಾಟಕದ ಆರಂಭದ ಸಂಚಿಕೆಯಲ್ಲಿ ಪತ್ರಿಕೆಯ ವ್ಯಾಪ್ತಿ ಮತ್ತು ಉದ್ದೇಶವನ್ನು ಹೀಗೆ ಹೇಳಲಾಗಿದೆ. "ಈ ಪತ್ರಿಕೆಯ ವ್ಯಾಪ್ತಿ ವಿಶಾಲವಾದುದು. ವಿಜ್ಞಾನ ಸಾಹಿತ್ಯಗಳನ್ನುಳಿದು ಎಲ್ಲಾ ವಿಷಯಗಳು ಇದರ ಸೀಮೆಗೆ ಒಳಪಡುತ್ತವೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಮನಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ಪುರಾತತ್ತ್ವ, ಪತ್ರಿಕೋದ್ಯಮ, ಭಾಷಾಶಾಸ್ತ್ರ, ಭೂಗೋಳಶಾಸ್ತ್ರ, ನ್ಯಾಯಶಾಸ್ತ್ರ, ಅಪರಾಧಶಾಸ್ತ್ರ, ಗ್ರಂಥಾಲಯಶಾಸ್ತ್ರ, ಮಾನವ ಶಾಸ್ತ್ರ, ವಾಣಿಜ್ಯ, ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಉಪಯುಕ್ತವೂ, ವಿಚಾರಪೂರ್ಣವೂ, ಸಂಶೋಧನಾತ್ಮಕವೂ ಆದ ಲೇಖನ, ವಿಮರ್ಶೆ ಪ್ರಬಂಧಗಳೇ ಮುಂತಾದವುಗಳನ್ನು ಪ್ರಕಟಿಸುವುದು ಪತ್ರಿಕೆಯ ಉದ್ದೇಶ". ಇದರಂತೆ ಎಂಥ ವಿಷಯವನ್ನೇ ಆದರೂ ಕನ್ನಡದಲ್ಲಿ ಸಮರ್ಥವಾದ ರೀತಿಯಲ್ಲಿ ಹೇಳಬಹುದು ಎಂಬುದನ್ನು ಈ ಪತ್ರಿಕೆ ಸಾಧಿಸಿತೋರಿಸಿದೆ.

1970ರಲ್ಲಿ ಜನ್ಮತಳೆದ ಈ ನಿಯತಕಾಲಿಕೆಗೆ ಪ್ರಧಾನ ಸಂಪಾದಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿರುತ್ತಾರೆ. ಅದರಂತೆ ಪ್ರಥಮ ಸಂಚಿಕೆಯ ಪ್ರಧಾನ ಸಂಪಾದಕರು ಹಾ.ಮಾ.ನಾಯಕರು. ಎಚ್.ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಮತ್ತು ಎ.ವಿ.ನರಸಿಂಹಮೂರ್ತಿ ಇವರ ಪ್ರಥಮ ಸಂಪಾದಕರಾಗಿದ್ದರು.













Download Download Download Download

# Committee Members

| SL No. | Name | Resume |
|---|---|---|
| 1 | **Dr.K.SADASHIVA**<br>Professor and Chairman,<br>Department of Studies in History | Click |
| 2 | **Dr. D V Gopalappa**<br>Professor of Economics and Chairman | Click |
| 3 | **Prof. M. R. GANGADHAR**<br>Professor of Anthropology and Chairman | Click |

ನಿರ್ದೇಶಕರು,
ಪ್ರಸಾರಾಂಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಹುಣಸೂರು ರಸ್ತೆ,
ಮೈಸೂರು-570006

ಸಂಪರ್ಕಿಸಿ

0821 - 2415311, 2419387, 2419370

prasarangauom@gmail.com
info-prasaranga@uni-mysore.ac.in
(ನಿಯತಕಾಲಿಕೆಗಳ ವಿಚಾರಣೆಗೆ ಮಾತ್ರ)

ನಿಮ್ಮ ಹೆಸರು

ನಿಮ್ಮ ಮೇಲ್

ನಿಮ್ಮ ಫೋನ್ ಸಂಖ್ಯೆ

ಸಂದೇಶ

ಕಳುಹಿಸಿ

© ಪ್ರಸಾರಾಂಗ. ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.